ಕರ್ನಾಟಕ ವಿಧಾನ ಪರಿಷತ್ತು

| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | | 676 |
|---|---|---|
| ಮಾನ್ಯ ಸದಸ್ಯರ ಹೆಸರು | | **ಶ್ರೀಮತಿ ಹೇಮಲತಾ ನಾಯಕ್ (ವಿಧಾನ ಸಭೆಯಿಂದ ಚುನಾಯಿತರಾದವರು)** |
| ಉತ್ತರಿಸುವ ಸಚಿವರು | | **ಉನ್ನತ ಶಿಕ್ಷಣ ಸಚಿವರು** |
| ಉತ್ತರಿಸಬೇಕಾದ ದಿನಾಂಕ | | **11.12.2023** |
| ಪ್ರಶ್ನೆ | | **ಉತ್ತರ** |
| (ಅ) | ಉನ್ನತ ಶಿಕ್ಷಣ ಇಲಾಖೆಯ ಪಿ.ಹೆಚ್.ಡಿ. ಪ್ರವೇಶ ಪ್ರಕ್ರಿಯೆಯಲ್ಲಿ 371ಜೆ ಅನ್ವಯ ಮೀಸಲಾತಿ ನೀಡಕೂಡದೆಂದು ದಿನಾಂಕ: 14.02.2020 ರಂದು ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಿಗೆ ಸೂಚನೆಯನ್ನು ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸದರಿ ಸೂಚನೆಯು 371 ಜೆ ಅಡಿಯಲ್ಲಿ ನೀಡಲಾದ ಸಂವಿಧಾನಬದ್ಧ ಹಕ್ಕಿನ ಉಲ್ಲಂಘನೆಯಲ್ಲವೇ; | ಉನ್ನತ ಶಿಕ್ಷಣ ಇಲಾಖೆಯ ಪಿ.ಹೆಚ್.ಡಿ. ಪ್ರವೇಶ ಪ್ರಕ್ರಿಯೆಯಲ್ಲಿ 371ಜೆ ಅನ್ವಯ ಮೀಸಲಾತಿ ನೀಡಕೂಡದೆಂದು ದಿನಾಂಕ: 14.02.2020 ರಂದು ರಾಜ್ಯದ ಯಾವ ವಿಶ್ವವಿದ್ಯಾಲಯಕ್ಕೂ ಸೂಚನೆಯನ್ನು ನೀಡಿರುವುದಿಲ್ಲ.<br>ಬದಲಿಗೆ ಪ್ರಶ್ನೆಯಲ್ಲಿ ಉಲ್ಲೇಖಿಸಿರುವ ಸರ್ಕಾರದ ಪತ್ರ ಸಂಖ್ಯೆ: ಇಡಿ 170 ಯುಎನ್ಇ 2021, ದಿನಾಂಕ: 14.02.2022ರ ಪತ್ರದಲ್ಲಿ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಿಗೆ ಯುಜಿಸಿ ರೆಗ್ಯೂಲೇಷನ್ 2021ರ ತಿದ್ದುಪಡಿ ಗೆಜೆಟ್ ಅಧಿಸೂಚನೆ ದಿನಾಂಕ: 11.10.2021 ರನ್ವಯ ಸದ್ಯಕ್ಕೆ ವಿಶ್ವವಿದ್ಯಾಲಯಗಳ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರ ಹುದ್ದೆಯ ನೇರ ನೇಮಕಾತಿಗೆ ದಿನಾಂಕ:01.07.2023 ರಿಂದ Ph.D ಪದವಿ ಕಡ್ಡಾಯವೆಂದು (The Ph.D degree shall be a mandatory qualification for direct recruitment to the post of Assistant Professor in department of the Universities with effect from 01.07.2023) ತಿಳಿಸಲಾಗಿರುತ್ತದೆ. |
| (ಆ) | ಪಿ.ಹೆಚ್.ಡಿ. ಪ್ರವೇಶ ಪ್ರಕ್ರಿಯೆಯಲ್ಲಿ 371ಜೆ ಅನ್ವಯ ಮೀಸಲಾತಿ ನೀಡದಿರಲು ಕಾರಣವೇನು; (ವಿವರ ನೀಡುವುದು) | The Karnataka Educational Institutions (Regulations of Admission in the Hyderabad-Karnataka Region) Order, 2013 ರ ಕಲಂ 6 ಮತ್ತು 07ನೇ ಕಲಂಗಳಲ್ಲಿ ಈ ಕೆಳಕಂಡಂತೆ ಅವಕಾಶವನ್ನು ಕಲ್ಪಿಸಲಾಗಿದ್ದು, ಅದರಂತೆ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಿಗೂ ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 269 ಯುಎನ್ಇ 2014, ದಿನಾಂಕ: 13.05.2014ರಲ್ಲಿ ನಿರ್ದೇಶನ ನೀಡಲಾಗಿರುತ್ತದೆ;<br>**ಕಲಂ 6: ಪ್ರಾದೇಶಿಕ ವಿಶ್ವವಿದ್ಯಾಲಯಗಳು ಮತ್ತು ಶೈಕ್ಷಣಿಕ ಸಂಸ್ಥೆಗಳಲ್ಲಿ ಮೀಸಲಾತಿ;**<br>1. ಸ್ಥಳೀಯ ಪ್ರದೇಶದಲ್ಲಿರುವ ಒಂದನೇ ಅನುಸೂಚಿಯಲ್ಲಿ ಉಲ್ಲೇಖಿಸಲಾದ ಯಾವುದೇ ಪ್ರಾದೇಶಿಕ ವಿಶ್ವವಿದ್ಯಾಲಯ ಅಥವಾ ಶೈಕ್ಷಣಿಕ ಸಂಸ್ಥೆಯಲ್ಲಿನ ಅಧ್ಯಯನದ ಪ್ರತಿಯೊಂದು ಕೋರ್ಸಿನಲ್ಲಿ ಲಭ್ಯವಿರುವ ಸ್ಥಾನಗಳ ಶೇಕಡಾ ಎಪ್ಪತ್ತರಷ್ಟು ಪ್ರವೇಶಾತಿಯನ್ನು, ಅಂಥ ವಿಶ್ವವಿದ್ಯಾಲಯ ಅಥವಾ ಶೈಕ್ಷಣಿಕ ಸಂಸ್ಥೆಗಳಿಗೆ ಸಂಬಂಧಿಸಿದ ಸ್ಥಳೀಯ ವ್ಯಕ್ತಿಗಳಿಗೆ ಮೀಸಲಿರಿಸತಕ್ಕದ್ದು.<br>2. (1) ನೇ ಉಪ-ಕಂಡಿಕೆಯ ಅಡಿಯಲ್ಲಿ ಸ್ಥಳೀಯ ವ್ಯಕ್ತಿಗಳಿಗೆ ಮೀಸಲಿರಿಸಬೇಕಾದ ಸ್ಥಾನಗಳ ಸಂಖ್ಯೆಯನ್ನು ನಿರ್ಧರಿಸುವಾಗ ಸ್ಥಾನದ ಯಾವುದೇ ಅಪೂರ್ಣಾಂಕವನ್ನು ಒಂದು ಎಂದು ಲೆಕ್ಕಹಾಕತಕ್ಕದ್ದು;<br>3. ಪರಂತು, ಕನಿಷ್ಠ ಪಕ್ಷ ಒಂದು ಮೀಸಲು ಸ್ಥಾನವನ್ನು ಇಡತಕ್ಕದ್ದು. |
| (ಇ) | ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಹೈದ್ರಾಬಾದ್ ಕರ್ನಾಟಕ ಪ್ರದೇಶದ ಪ್ರವೇಶ ನಿಯಮಗಳು) ಆದೇಶ, 2013ರ ಯಾವ ನಿಯಮಗಳಲ್ಲಿ ಪಿ.ಹೆಚ್.ಡಿ. ಪ್ರವೇಶ ಪ್ರಕ್ರಿಯೆಯಲ್ಲಿ 371ಜೆ ಮೀಸಲಾತಿ ಅನ್ವಯಿಸುವುದಿಲ್ಲವೆಂದು ಸೂಚಿಸಲಾಗಿದ್ದು, ಈ ಕುರಿತು ಮಾಹಿತಿ ನೀಡುವುದು; | |

| | | |
|---|---|---|
| | | **ಕಲಂ 7: ರಾಜ್ಯವಾರು ವಿಶ್ವವಿದ್ಯಾಲಯಗಳು ಮತ್ತು ರಾಜ್ಯವಾರು ಶೈಕ್ಷಣಿಕ ಸಂಸ್ಥೆಗಳಲ್ಲಿ ಮೀಸಲಾತಿ;**<br>1. ಎರಡನೇ ಅನುಸೂಚಿಯಲ್ಲಿ ಉಲ್ಲೇಖಿಸಲಾದ ರಾಜ್ಯವಾರು ವಿಶ್ವವಿದ್ಯಾಲಯ ಅಥವಾ ರಾಜ್ಯವಾರು ಶೈಕ್ಷಣಿಕ ಸಂಸ್ಥೆಯಲ್ಲಿ ಕಲ್ಪಿಸಲಾದ ಪ್ರತಿಯೊಂದು ಅಧ್ಯಯನದ ವ್ಯಾಸಂಗ ಕ್ರಮದಲ್ಲಿ ಲಭ್ಯವಿರುವ ಸ್ಥಾನಗಳಲ್ಲಿ ಶೇಕಡಾ 8% ಹೈದ್ರಾಬಾದ್-ಕರ್ನಾಟಕ ಪ್ರದೇಶದ ಸ್ಥಳೀಯ ಅಭ್ಯರ್ಥಿಗಳಿಗೆ ಹಂಚಿಕೆ ಮಾಡುವುದು.<br>2. (1) ನೇ ಉಪ ಕಂಡಿಕೆಯ ಅಡಿಯಲ್ಲಿ ಸ್ಥಳೀಯ ವ್ಯಕ್ತಿಗಳ ಪರವಾಗಿ ಮೀಸಲಿರಿಸಬೇಕಾದ ಸ್ಥಾನಗಳ ಸಂಖ್ಯೆಯನ್ನು ನಿರ್ಧರಿಸುವಾಗ, ಸ್ಥಾನಗಳ ಯಾವುದೇ ಅಪೂರ್ಣಾಂಕವನ್ನು ಒಂದು ಎಂದು ಲೆಕ್ಕಹಾಕತಕ್ಕದ್ದು. ಪರಂತು, ಕನಿಷ್ಠ ಪಕ್ಷ ಒಂದು ಮೀಸಲು ಸ್ಥಾನವನ್ನು ಮೀಸಲಿರಿಸದೇ ಇರತಕ್ಕದ್ದು.<br>3. (1) ನೇ ಉಪಕಂಡಿಕೆಯ ಅಡಿಯಲ್ಲಿ, ಸ್ಥಳೀಯ ಪ್ರದೇಶಕ್ಕೆ ಸಂಬಂಧಿಸಿದ ಸ್ಥಳೀಯ ವ್ಯಕ್ತಿಗಳಿಗೆ ಸೇರಿದ ಮೀಸಲು ಸ್ಥಾನಗಳನ್ನು ಹಂಚಿಕೆ ಮಾಡುವಾಗ, ಸ್ಥಾನದ ಅಪೂರ್ಣಾಂಕವನ್ನು ಸರಿಹೊಂದಿಸತಕ್ಕದ್ದು ಮತ್ತು ಅಗತ್ಯವಿದ್ದರೆ, ಉಳಿದಿರುವ ಹೆಚ್ಚಿನ ಅಪೂರ್ಣಾಂಕಗಳನ್ನು ಸಹ ಮತ್ತೊಂದಕ್ಕೆ ಎಂದು ಸರಿ ಹೊಂದಿಸತಕ್ಕದ್ದು; ಮತ್ತು ಹಾಗೆ ಲೆಕ್ಕ ಹಾಕಬೇಕಾದ ಅಪೂರ್ಣಾಂಕವನ್ನು, ಸಮಾನವಾಗಿರುವ ಅಪೂರ್ಣಾಂಕಗಳ ಕಾರಣದಿಂದ ಆಯ್ಕೆ ಮಾಡಲು ಸಾಧ್ಯವಾಗದಿದ್ದಲ್ಲಿ, ಆಯ್ಕೆಯನ್ನು ಚೀಟಿ ಎತ್ತುವ ಮೂಲಕ ಆರಿಸತಕ್ಕದ್ದು; |
| (ಈ) | ಕಲ್ಯಾಣ ಕರ್ನಾಟಕ ಪ್ರದೇಶದ ವಿದ್ಯಾರ್ಥಿಗಳಿಗೆ ಇತರೆ ವಿಶ್ವವಿದ್ಯಾಲಯಗಳಲ್ಲಿ ಪಿ.ಹೆಚ್.ಡಿ. ಪ್ರವೇಶ ಪ್ರಕ್ರಿಯೆಯಲ್ಲಿ 371ಜೆ ಮೀಸಲಾತಿ ನೀಡದಿರುವುದರಿಂದ ಹಿಂದುಳಿದ ಪ್ರದೇಶದ ವಿದ್ಯಾರ್ಥಿಗಳಿಗೆ ಅನ್ಯಾಯವಾಗುವುದಿಲ್ಲವೇ; ಹಾಗಿದ್ದಲ್ಲಿ, ಸದರಿ ಪ್ರವೇಶ ಪ್ರಕ್ರಿಯೆಗಳಲ್ಲಿ ಮೀಸಲಾತಿ ನೀಡಲು ಸರ್ಕಾರಕ್ಕೆ ಇರುವ ತೊಂದರೆ ಏನು? | The Karnataka Educational Institutions (Regulations of Admission in the Hyderabad-Karnataka Region) Order, 2013 ರ ಕಲಂ 6 ಮತ್ತು 07ನೇ ಕಲಂಗಳಲ್ಲಿ ರಾಜ್ಯವಾರು ವಿಶ್ವವಿದ್ಯಾಲಯಗಳು ಮತ್ತು ರಾಜ್ಯವಾರು ಶೈಕ್ಷಣಿಕ ಸಂಸ್ಥೆಗಳಲ್ಲಿ 371ಜೆ ಮೀಸಲಾತಿ ಕಲ್ಪಿಸಿರುವುದರಿಂದ ಪ್ರಶ್ನೆ ಉದ್ಭವಿಸುವುದಿಲ್ಲ. |

ಸಂಖ್ಯೆ: ಇಡಿ 238 ಯುಎನ್‌ಇ 2023

**(ಡಾ: ಎಂ.ಸಿ. ಸುಧಾಕರ್)**
ಉನ್ನತ ಶಿಕ್ಷಣ ಸಚಿವರು